## ವಿಟಿಯು ಅಂತರ್ ಕಾಲೇಜು ಆ್ಯತ್ಲೆಟಿಕ್ಸ್

# ಸಹ್ಯಾದ್ರಿ ಕಾಲೇಜು ತಂಡ 7ನೇ ಬಾರಿ ಚಾಂಪಿಯನ್



ಅಂತರ್‌ಕಾಲೇಜು ಆ್ಯತ್ಲೆಟಿಕ್ಸ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದ ತಂಡ.

**ಮಹಾನಗರ,** ನ. 28: ಬೀದರ್‌ನ ಜಿಎನ್‌ಡಿಇಸಿ ಮತ್ತು ಎಸ್ ಜೆಸಿಐಟಿ ಆಶ್ರಯದಲ್ಲಿ ಇತ್ತೀಚೆಗೆ ಚಿಕ್ಕಬಳ್ಳಾಪುರದಲ್ಲಿ ನಡೆದ ವಿ.ಟಿ.ಯು. ಅಂತರ್‌ಕಾಲೇಜು ಆ್ಯತ್ಲೆಟಿಕ್ಸ್‌ನಲ್ಲಿ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು 87 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿಯನ್ನು ಪಡೆದು ಕೊಂಡಿದೆ.

ಸಹ್ಯಾದ್ರಿ ಕಾಲೇಜು ಸಮಗ್ರ ಪ್ರಶಸ್ತಿಯನ್ನು ಪಡೆದು ಕೊಳ್ಳುತ್ತಿರುವುದು 7 ನೇ ಬಾರಿಯಾಗಿದೆ.

ಸಹ್ಯಾದ್ರಿ ಮಹಿಳಾ ತಂಡವು 49 ಅಂಕಗಳೊಂದಿಗೆ ಮಹಿಳಾ ವಿಭಾಗದಲ್ಲಿ ಚಾಂಪಿಯನ್, ಸಹ್ಯಾದ್ರಿ ಪುರುಷರ ತಂಡವು 38 ಅಂಕಗಳೊಂದಿಗೆ ಪುರುಷರ ವಿಭಾಗದಲ್ಲಿ ಚಾಂಪಿಯನ್ ಗಳಿಸಿತು. ಮಾರ್ಚ್ ಫಾಸ್ಟ್‌ನಲ್ಲಿ ಸಹ್ಯಾದ್ರಿ ತಂಡ 2ನೇ ಸ್ಥಾನವನ್ನು ಗೆದ್ದುಕೊಂಡಿತು.

ಮಹಿಳಾ ವಿಭಾಗದಲ್ಲಿ ಮನೀಶಾ ಎ. ಅತ್ಯುತ್ತಮ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾರೆ.

### ಪದಕಗಳನ್ನು ಗೆದ್ದ ಸಹ್ಯಾದ್ರಿ ವಿದ್ಯಾರ್ಥಿಗಳು

ಮನೀಶಾ ಎ: 2ನೇ ಸ್ಥಾನ 100 ಮೀ. ಮತ್ತು 200 ಮೀ. 1ನೇ ಸ್ಥಾನ, ದೀಕ್ಷಾ ಪಿ.: ಹೆಪ್ಟಥ್ಲಾನ್‌ನಲ್ಲಿ ಪ್ರಥಮ ಸ್ಥಾನ ಮತ್ತು ಹೈಜಂಪ್ ನಲ್ಲಿ 2ನೇ ಸ್ಥಾನ, ಹರ್ಷಿತ್ವಿ: ಪೋಲ್‌ವಾಲ್ಟ್‌ನಲ್ಲಿ ಪ್ರಥಮ, ಅನ್ವಿತಾ ಶೆಟ್ಟಿ: ಲಾಂಗ್ ಜಂಪ್ ಮತ್ತು 100 ಮೀ. ಹರ್ಡಲ್ಸ್, ಸುಶ್ಮಿತಾ ಪಿ.ಆರ್: 400 ಮೀಟರ್ ಹರ್ಡಲ್ಸ್ 3ನೇ ಸ್ಥಾನ, ಮಾನಸಾ ಎಸ್. ಶೆಟ್ಟಿ: ಜಾವೆಲಿನ್ ಥ್ರೋದಲ್ಲಿ 3ನೇ ಸ್ಥಾನ, ಮೊಹಮ್ಮದ್ ಜಹೀರ್: ಲಾಂಗ್ ಜಂಪ್‌ನಲ್ಲಿ 1ನೇ ಸ್ಥಾನ, 100 ಮೀ.ನಲ್ಲಿ 3ನೇಸ್ಥಾನ.

ಜಾಕ್ಸನ್‌ಎಫ್. ಪಿರೇರಾ: ಲಾಂಗ್‌ಜಂಪ್‌ನಲ್ಲಿ 2ನೇ ಸ್ಥಾನ, ಮೋಹಿತ್‌ಎಂ: 400 ಮೀ.ನಲ್ಲಿ 2 ನೇಸ್ಥಾನ, ಸ್ವಾತಿ ಗಾಣಿಗ: ಪೋಲ್ ವಾಲ್ಟ್‌ನಲ್ಲಿ 2ನೇ ಸ್ಥಾನ ಮತ್ತು ಹೆಪ್ಟಾಥ್ಲಾನ್‌ನಲ್ಲಿ 3ನೇ ಸ್ಥಾನ, ಎಸ್. ಸಹಾನಾ: 10000 ಮೀ. ನಲ್ಲಿ 2 ನೇ ಸ್ಥಾನ, ಸಂಜನಾ: ಶಾಟ್‌ಪುಟ್ ನಲ್ಲಿ 3ನೇ ಸ್ಥಾನ, . ಮುಹಮ್ಮದ್ ಸುಹೈಬ್ ಬಿ., : ಹೈಜಂಪ್‌ನಲ್ಲಿ ಪ್ರಥಮ ಸ್ಥಾನ, ಸುಶ್ಮಿತಾ ಮೆಂಡನ್: ಡಿಸ್ಕಸ್ ಥ್ರೋದಲ್ಲಿ 3ನೇ ಸ್ಥಾನ, ದೇವಿಕಾ: 400 ಮೀ. ನಲ್ಲಿ 2 ನೇ ಸ್ಥಾನ ಮತ್ತು 400 ಮೀ. ಹರ್ಡಲ್ಸ್, 4/100 ಮೀ. ರಿಲೇ (ಮಹಿಳೆಯರು): ಮನೀಷಾ ಎ., ಅನ್ವಿತಾ ಶೆಟ್ಟಿ, ದೀಕ್ಷಾ ಪಿ., ವೈಷ್ಣವಿ ಡಿ.ಕೆ. 2ನೇ ಸ್ಥಾನ .

4/100 ಮೀ. ರಿಲೇ (ಪುರುಷರು): ಜಾಕ್ಸನ್‌ಎಫ್. ಪಿರೇರಾ, ಮೊಹಮದ್ ಜಹೀರ್, ಸಾತ್ವಿಕ್ ಸಿ. ರೈ ಮತ್ತು ಅಮನ್‌ಎಚ್.ಎ.

1 ನೇ ಸ್ಥಾನ 4ಡ 400 ಮೀ. (ಪುರುಷರು): ಮೋಹಿತ್ ಎಂ., ಅಕ್ಷಯ ಕುಮಾರ್ ಬಿ. ವೈಭವ್, ಕೃಷ್ಣಮೂರ್ತಿ ನಾಯಕ್ ಮತ್ತು ಭಾರತ್‌ಎಂ.ಎಚ್.